ದಿನಾಂಕಃ 03-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಸಿ. ಆರ್. ಎಸ್. ವಕೀಲರಿಂದ

6. ನಾನು ನಿಪಿ.6 ರ ನೋಟೀಸ್ ನ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ ಆದರೆ ನೆನಪಿಲ್ಲ. ನೋಟೀಸ್ ನ ವಿಚಾರ ಸ್ವಲ್ಪ ಗೊತ್ತು. ನಿಪಿ.7 ರಲ್ಲಿ ಏನು ಉತ್ತರ ಬರೆದಿರುತ್ತೇನೆ ಎಂದು ತಿಳಿದುಕೊಂಡಿರುತ್ತೇನೆ. ನಿಪಿ.6 ರ ನೋಟೀಸ್ ನಲ್ಲಿ ಎದುರುದಾರರು ಹಳೆಯ ಭಿನ್ನಾಭಿಪ್ರಾಯಗಳನ್ನು ಮರೆತು ಹೊಸದಾಗಿ ಬಾಳು ಮಾಡೋಣ ಎಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರ ಖಾತೆಗೆ ನಾಗಮಂಗಲ ಬ್ಯಾಂಕ್ ನಲ್ಲಿ ಹಣ ಹಾಕಿರುತ್ತೇನೆ. ನಾನು ವಕೀಲರ ಮೂಲಕ ನೋಟೀಸ್ ಕೊಡುವಾಗಲೇ ಈ ದಾಖಲೆಗಳನ್ನು ಕೊಟ್ಟಿರುತ್ತೇನೆ. ಈ ವಿಚಾರವನ್ನು ನೋಟೀಸ್ ನಲ್ಲಿ ಬರೆಯಿಸಿರುತ್ತೇನೆ. ಅರ್ಜಿಯಲ್ಲಿಯೂ ಸಹ ಅವುಗಳನ್ನು ಬರೆಯಿಸಿರುತ್ತೇನೆ. ಆ ಸಮಯದಲ್ಲಿ ಎದುರುದಾರರು ನನ್ನನ್ನು ಸಹ ಬಂದು ಬಾಳು ಮಾಡು ಎಂದು ಕೇಳಿಕೊಂಡರು ಎಂದರೆ ಸುಳ್ಳು. ನಾನು ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ